**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಪಪೂಶಿ/ಶೈಶಾ-04/ದಾ.ಅ./2014-15 ದಿನಾಂಕ: 04-08-2014

"ಪ್ರಾಮುಖ್ಯವಾದುದು"

ಉಪನಿರ್ದೇಶಕರು,

ಪದವಿ ಪೂರ್ವ ಶಿಕ್ಷಣ ಇಲಾಖೆ,

................................................ ಜಿಲ್ಲೆ.

ಮಾನ್ಯರೆ,

ವಿಷಯ: 2014-15ನೇ ಸಾಲಿನಲ್ಲಿ ಪ್ರವೇಶ ಪಡೆದ ಪ್ರಥಮ ಪಿಯುಸಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ಸಲ್ಲಿಸುವ ಕುರಿತು.

ಉಲ್ಲೇಖ: ಪದವಿ ಪೂರ್ವ ಶಿಕ್ಷಣ ಇಲಾಖೆಯು 2014-15ನೇ ಸಾಲಿನಲ್ಲಿ ಹೊರಡಿಸಿರುವ ಶೈಕ್ಷಣಿಕ ಮಾರ್ಗಸೂಚಿ.

*****

ಪದವಿ ಪೂರ್ವ ಶಿಕ್ಷಣ ಇಲಾಖೆಯು 2014-15ನೇ ಸಾಲಿನಲ್ಲಿ ಹೊರಡಿಸಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿ ದಾಖಲಾತಿ, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಮಾರ್ಗಸೂಚಿಯಲ್ಲಿ ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ಹೊಸದಾಗಿ ದಾಖಲಾತಿ ಪಡೆದ ಎಲ್ಲ ವಿದ್ಯಾರ್ಥಿಗಳ ಮಾಹಿತಿ, ಕಾಲೇಜು/ಭಾಷೆ ಬದಲಾವಣೆ, ಖಾಸಗಿ ಅಭ್ಯಾಸ, ಒಂದು ಭಾಷಾ ವಿಷಯ ವಿನಾಯಿತಿ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿಗದಿತ ನಮೂನೆಯಲ್ಲಿ ಮಾಹಿತಿಗಳನ್ನು ನಿಗದಿಪಡಿಸಿದ ದಿನಾಂಕದೊಳಗೆ ಎಲ್ಲಾ ಪ್ರಾಂಶುಪಾಲರುಗಳು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸಲು ಹಾಗೂ ಜಿಲ್ಲಾ ಉಪನಿರ್ದೇಶಕರು ಈ ನಿರ್ದೇಶನಾಲಯಕ್ಕೆ ಸದರಿ ಮಾಹಿತಿಗಳನ್ನು ನಿಗದಿತ ಸಮಯದೊಳಗೆ ಸಲ್ಲಿಸಲು ತಿಳಿಸಲಾಗಿದೆ. ಅದರಂತೆ ರಾಜ್ಯದ ಎಲ್ಲ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲ ಕಾಲೇಜುಗಳ ಮಾಹಿತಿಗಳನ್ನು ಈ ನಿರ್ದೇಶನಾಲಯಕ್ಕೆ ದಿನಾಂಕ 30-07-2014ರಂದು ಸಲ್ಲಿಸಲು ಸೂಚಿಸಲಾಗಿತ್ತು. ಆದರೆ ದಾಖಲಾತಿಯ ದಿನಾಂಕವನ್ನು ದಿನಾಂಕ 28-07-2014ರವರೆಗೆ ವಿಸ್ತರಿಸಿದ ಕಾರಣ, ಸದರಿ ಮಾಹಿತಿಗಳನ್ನು ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳು **ದಿನಾಂಕ 06-08-2014ರೊಳಗಾಗಿ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸಲು** ಹಾಗೂ **ಜಿಲ್ಲಾ ಉಪನಿರ್ದೇಶಕರು ದಿನಾಂಕ 12-08-2014ರೊಳಗಾಗಿ** ಸದರಿ **ಮಾಹಿತಿಗಳನ್ನು ಈ ನಿರ್ದೇಶನಾಲಯಕ್ಕೆ ಸಲ್ಲಿಸಲು** ಸೂಚಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯು ಹೊರಡಿಸಿರುವ ಉಲ್ಲೇಖಿತ ಮಾರ್ಗಸೂಚಿಯಂತೆ ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲಾ ಪದವಿ ಪೂರ್ವ ಕಾಲೇಜುಗಳು ನಿಗದಿತ ನಮೂನೆಯಲ್ಲಿ ಕೋರಿರುವ ಎಲ್ಲ ಮಾಹಿತಿಗಳನ್ನು ಲಗತ್ತಿಸಿ ಸಲ್ಲಿಸಬೇಕಾಗುತ್ತದೆ. ಪ್ರತಿ ಕಾಲೇಜು ಮಾಹಿತಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಸಲ್ಲಿಸುವ ಸಂದರ್ಭದಲ್ಲಿ ಈ ಕೆಳಕಂಡ ದಾಖಲೆಗಳು ಅದರೊಂದಿಗೆ ಕಡ್ಡಾಯವಾಗಿ ಲಗತ್ತಿಸಿರುವ ಬಗ್ಗೆ ಪರಿಶೀಲಿಸಿ ಜಿಲ್ಲಾ ಉಪನಿರ್ದೇಶಕರು ದೃಢೀಕರಿಸಲು ಸೂಚಿಸಿದೆ.

1. **ಪ್ರೊಫಾರ್ಮಾ** –ಎ : 2014-15ನೇ ಸಾಲಿನ ಮಾರ್ಗಸೂಚಿಯಲ್ಲಿ ಹೊರಡಿಸಿರುವ **ಪ್ರೊಫಾರ್ಮಾ**–ಎ ರಲ್ಲಿ ಕೋರಿರುವ ಎಲ್ಲ ಮಾಹಿತಿಗಳನ್ನು ಸರಿಯಾಗಿ ತುಂಬಿದೆಯೇ ಎಂಬುದರ ಬಗ್ಗೆ ಪರಿಶೀಲಿಸುವುದು. ಇದರಲ್ಲಿ ನಮೂದಿಸಿದಂತೆ ಖಜಾನೆಯಲ್ಲಿ ಬೋಧನಾ ಶುಲ್ಕ, ನೋಂದಣಿ ಶುಲ್ಕ, ದಾಖಲಾತಿ ಶುಲ್ಕ, ವಿಳಂಬ ದಾಖಲಾತಿ ಶುಲ್ಕ, ವಿಶೇಷ ವಿಳಂಬ ದಾಖಲಾತಿ ಶುಲ್ಕ, ತಾತ್ಕಾಲಿಕ ಯೋಗ್ಯತಾ ಪತ್ರ ಶುಲ್ಕ, ಇತ್ಯಾದಿಗಳನ್ನು ಪಾವತಿಸಿರುವ ಬಗ್ಗೆ ಮೂಲ ಚಲನ್‌ಗಳನ್ನು ಲಗತ್ತಿಸಿದೆಯೇ ಎಂಬು ಪರಿಶೀಲಿಸುವುದು.

2. **ಅನೆಕ್ಷರ್ – 1** : 2014–15ನೇ ಸಾಲಿನ ಮಾರ್ಗಸೂಚಿಯಲ್ಲಿ ಹೊರಡಿಸಿರುವ **ಅನೆಕ್ಷರ್ – 1** ರಲ್ಲಿ ಪ್ರಥಮ ಪಿಯುಸಿ ತರಗತಿಗೆ ದಾಖಲಾದ ಎಲ್ಲಾ ವಿದ್ಯಾರ್ಥಿಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಲಾಗಿದೆಯೇ ಎಂದು ಪರಿಶೀಲಿಸುವುದು. ಹಾಗೂ ಹೊರರಾಜ್ಯದ ಹಾಗೂ ಹೊರದೇಶದ ವಿದ್ಯಾರ್ಥಿಗಳಿದ್ದಲ್ಲಿ ಸದರಿ ವಿದ್ಯಾರ್ಥಿಗಳ **10ನೇ ತರಗತಿಯ ತತ್ಸಮಾನ ಪರೀಕ್ಷೆಯ ಅಂಕಪಟ್ಟಿಯ ದೃಢೀಕೃತ ಘೋಟೋಪ್ರತಿಗಳನ್ನು ಹಾಗೂ ತಾತ್ಕಾಲಿಕ ಯೋಗ್ಯತಾ ಪತ್ರದ ಮೂಲಪ್ರತಿಗಳನ್ನು** ಲಗತ್ತಿಸಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು.

3. **ಅನೆಕ್ಷರ್ – 2** : 2014–15ನೇ ಸಾಲಿನ ಮಾರ್ಗಸೂಚಿಯಲ್ಲಿ ಹೊರಡಿಸಿರುವ **ಅನೆಕ್ಷರ್ – 2 ರಲ್ಲಿ** ಎಲ್ಲ ಕಾಲಂಗಳನ್ನು ಭರ್ತಿ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು. ಹೊರರಾಜ್ಯದ ಹಾಗೂ ಹೊರದೇಶದ ವಿದ್ಯಾರ್ಥಿಗಳಿದ್ದಲ್ಲಿ ಸದರಿ ವಿದ್ಯಾರ್ಥಿಗಳ **10ನೇ ತರಗತಿ ಹಾಗೂ 11ನೇ ತರಗತಿಯ ತತ್ಸಮಾನ ಪರೀಕ್ಷೆಯ ಅಂಕಪಟ್ಟಿಯ ದೃಢೀಕೃತ ಘೋಟೋಪ್ರತಿಗಳನ್ನು ಹಾಗೂ** ಈ ನಿರ್ದೇಶನಾಲಯದಿಂದ ನೀಡಿರುವ **ತಾತ್ಕಾಲಿಕ ಯೋಗ್ಯತಾ ಪತ್ರದ ಮೂಲ ಪ್ರತಿಗಳನ್ನು ಲಗತ್ತಿಸಲಾಗಿದೆಯೇ** ಎಂಬುದನ್ನು ಪರಿಶೀಲಿಸುವುದು.

4. **ಖಾಸಗಿ ಅಭ್ಯಾಸಕ್ಕೆ** ಅನುಮತಿ ಕೋರಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದ ಪ್ರಥಮ ಮತ್ತು ದ್ವಿತೀಯ ಪಿಯುಸಿ ಅಭ್ಯರ್ಥಿಗಳ ಅರ್ಜಿಗಳನ್ನು ಪಟ್ಟಿ ಮಾಡಿ ಅದರೊಂದಿಗೆ ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು ಟ್ಯಾಗ್ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು.

5. ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗೆ **ಭಾಷೆ/ಐಚ್ಛಿಕ ವಿಷಯ/ಸಂಯೋಜನೆ ಬದಲಾವಣೆ/ಕಾಲೇಜು ಬದಲಾವಣೆಯ** ಮೇರೆಗೆ ಪ್ರವೇಶ ನೀಡಿದ ಅಭ್ಯರ್ಥಿಗಳ ವಿವರಗಳನ್ನೊಳಗೊಂಡ **ಪಟ್ಟಿಯನ್ನು** ನಿಗದಿತ ಕಾಲೇಜು ಬದಲಾವಣೆ/ಸಂಯೋಜನೆ ಬದಲಾವಣೆ ಅರ್ಜಿಗಳು, **ಅಂಕಪಟ್ಟಿಗಳ ದೃಢೀಕೃತ ಘೋಟೋಪ್ರತಿಗಳು** ಹಾಗೂ ನಿಗದಿತ ಶುಲ್ಕವನ್ನು ಖಜಾನೆಗೆ ಪಾವತಿಸಿದ ಮೂಲಚಲನ್‌ಗಳೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

6. **ಭಾಷಾ ವಿನಾಯ್ತಿ ಅರ್ಜಿಗಳನ್ನು** ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲೆಯೊಂದಿಗೆ ವಿದ್ಯಾರ್ಥಿಯು ಯಾವ ಭಾಷಾ ವಿಷಯದಲ್ಲಿ ವಿನಾಯ್ತಿ ಪಡೆಯಬಯಸುತ್ತಿದ್ದಾನೆ ಎಂಬ ಮಾಹಿತಿಯನ್ನು ನಮೂದಿಸಿ ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.

ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ **ಪ್ರಾಂಶುಪಾಲರುಗಳು ಮೇಲ್ಕಂಡಂತೆ ಮಾಹಿತಿಗಳನ್ನು ದಿನಾಂಕ 06-08-2014ರೊಳಗೆ** ಜಿಲ್ಲಾ ಉಪನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ. ಮೇಲ್ಕಂಡ ದಾಖಲೆಗಳ ಆಧಾರದ ಮೇರೆಗೆ ಪ್ರತಿ ಕಾಲೇಜಿಗೆ ಬೇಕಾಗುವ ಓ.ಎಂ.ಆರ್. ಶೀಟುಗಳನ್ನು ಸರಬರಾಜು ಮಾಡಲಾಗುವುದು. ತಪ್ಪಿದಲ್ಲಿ, ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಪ್ರಾಂಶುಪಾಲರನ್ನು ಹೊಣೆಗಾರರನ್ನಾಗಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

**ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಾಲೇಜುಗಳ ಮೇಲ್ಕಂಡ ಮಾಹಿತಿಗಳನ್ನು ದೃಢೀಕರಿಸಿ ದಿನಾಂಕ 12-08-2014ರೊಳಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ಇದನ್ನು ಚಾಚು ತಪ್ಪದೇ ಪಾಲಿಸಲು ತಮಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.**

ತಮ್ಮ ವಿಶ್ವಾಸಿ.

ನಿರ್ದೇಶಕರು.
ಪದವಿ ಪೂರ್ವ ಶಿಕ್ಷಣ ಇಲಾಖೆ